

## ಆಯುಧ ಪೂಜೆಯೋ, ವೃತ್ತಿ ಪರಿಕರಗಳ ಪೂಜೆಯೋ

ಕರ್ನಾಟಕದ ಬುಡಕಟ್ಟು ಆದಿವಾಸಿ ಅಲೆಮಾರಿ ಇತರೆ ಸಮುದಾಯಗಳ ಬನ್ನಿಹಬ್ಬದ ಆಚರಣೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಎಲ್ಲಾ ಸಮುದಾಯಗಳು ತಮ್ಮ ತಮ್ಮ ವೃತ್ತಿ ಪರಿಕರಗಳನ್ನು ಸ್ವಚ್ಛಗೊಳಿಸಿ ಪೂಜಿಸುತ್ತಾರೆ. ಇದು ಎಷ್ಟು ವ್ಯಾಪಕವಾಗಿದೆ ಎಂದರೆ – ಯುದ್ಧಕ್ಕೆ ಸನ್ನದ್ಧರಾಗುವ ನೆಲೆಯಲ್ಲಿ ಹುಟ್ಟಿಕೊಂಡ 'ಆಯುಧ' ಪೂಜೆ ಪದವನ್ನು ಬದಲಿಸಿ, ಬದುಕಿನ ಕಾಯಕಗಳಿಗೆ ಸನ್ನದ್ಧರಾಗುವ 'ವೃತ್ತಿಪರಿಕರಗಳ ಪೂಜೆ' ಎಂದು ಬದಲಾಯಿಸುವಷ್ಟು. ಕಂಪ್ಯೂಟರ್ ಸೆಂಟರಿನ ಹುಡುಗರು ಕಂಪ್ಯೂಟರನ್ನೂ ಪೂಜಿಸುವುದನ್ನು ಕಾಣಬಹುದು. ದಸರಾ ಹೊತ್ತಿಗೆ ರೈತರ ಬೆಳೆಗಳು ಕಟಾವಿಗೆ ಬಂದಿರುತ್ತವೆ. ಹಾಗಾಗಿ ರೈತ ಸಮುದಾಯ ಕೃಷಿಯ ಸಲಕರಣೆಗಳನ್ನು ಪೂಜಿಸುತ್ತಾರೆ. ಹೀಗೆ ವಿಜಯದಶಮಿಯನ್ನು ಸಮುದಾಯಗಳು ಬದುಕಿನಲ್ಲಿ ವಿಜಯ ಸಾಧಿಸಲು ತಾವು ಕೈಗೊಂಡ ವೃತ್ತಿ ಪರಿಕರಗಳನ್ನೇ ಭಕ್ತಿಯಿಂದ ಪೂಜಿಸುತ್ತಾರೆ. ಇದನ್ನು ನೋಡಿದರೆ ಆಯುಧ ಪೂಜೆಯ ಬದಲಾಗಿ ವೃತ್ತಿಪರಿಕರಗಳ ಪೂಜೆ ಎಂದೇ ಕರೆಯಬಹುದು.



ದಸರಾ ಸಂದರ್ಭ ಯುವ ಪ್ರತಿಭೆಗಳ ಅನಾವರಣಕ್ಕೆ, ಪರಿಸರ ಕಾಳಜಿಯ ಅಭಿವ್ಯಕ್ತಿಗೂ ವೇದಿಕೆ

ಪ್ರದೇಶದಲ್ಲಿ ಕುರಿಗಳನ್ನು ಮೇಯಿಸುತ್ತಿರುತ್ತಾರೆ. ಗುಡಾರ ಹೂಡಿದ ಸ್ಥಳಗಳಲ್ಲಿ ಹಾಗೂ ಸ್ವ–ಗ್ರಾಮಗಳಲ್ಲಿ ಒಂಬತ್ತು ದಿನಗಳವರೆಗೆ ಮನೆದೇವರ ಹೆಸರಿನ ಮೇಲೆ ದೀಪ ಹಚ್ಚುತ್ತಾರೆ. ನವರಾತ್ರಿ ಅಥವಾ ಮಹಾನವಮಿ ದಿನ ತಮ್ಮ ಕುಲ ಕಸುಬಿಗೆ ಬಳಸುವ ಸಲಕರಣೆಗಳಾದ ಕೋಲು, ಕೊಡಲಿ, ಜ್ಯೋತಿ, ಕತ್ತರಿ, ವಡಚೀಲ ಇತ್ಯಾದಿ ವಸ್ತುಗಳನ್ನು ತೊಳೆದು ಕರಿಯ ಕಂಬಳಿಯಿಂದ ಗದ್ದುಗೆ ಮಾಡಿ ಅದರ ಮೇಲೆ ಸಾಮಾನುಗಳನ್ನಿಡುವರು. ಹಬ್ಬದ ಪ್ರಯುಕ್ತ ಹೋಳಿಗೆ ಮಾಡುವರು. ಕುರಿಗಳು ಮೇವು ಮೇಯ್ದು ಅಡವಿಯಿಂದ ಸಾಯಂಕಾಲ ಗುಡಾರಕ್ಕೆ ಬಂದ ನಂತರ ವೃತ್ತಿ ಸಲಕರಣೆಗಳಿಗೆ ಭಂಡಾರ ಹಚ್ಚಿ ದೀಪ ಬೆಳಗಿ, ಕಾಯಿ ಒಡೆದು, ಕರ್ಪೂರದಿಂದ ಮಂಗಳಾರತಿಯನ್ನು ಬೆಳಗುವರು. ಸ್ವಗ್ರಾಮದಲ್ಲಿರುವ ಇವರ ಕುಟುಂಬದವರು ಎಲ್ಲಾ ದೇವರುಗಳಿಗೆ ಎಣ್ಣೆ ದೀಪ ಹಚ್ಚುತ್ತಾರೆ. ಪ್ರತಿಯೊಂದು ದೇವರಿಗೆ ಹೋಳಿಗೆ ನೈವೇದ್ಯ ಮಾಡಿ ಕಾಯಿ ಒಡೆಯುವ ಸಂಪ್ರದಾಯ ಇದೆ.

ಕರ್ನಾಟಕದ ಹಲವು ಬುಡಕಟ್ಟುಗಳು ನವರಾತ್ರಿಯನ್ನು ಪಿತೃಪಕ್ಷವಾಗಿ ಆಚರಿಸುತ್ತಾರೆ. ಹಿರಿಯರ ಹಬ್ಬವನ್ನಾಗಿಸುತ್ತಾರೆ. ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಈ ಆಯಾಮ ಹೆಚ್ಚಾಗಿದೆ. ಹಿರಿಯರ ಸಮಾಧಿ ಬಳಿ ಬನ್ನಿಗಿಡವನ್ನು ನೆಡುವ ಸಂಪ್ರದಾಯ ಕೆಲವೆಡೆ ಇದೆ.

ವಿಶೇಷವಾಗಿ ಕಮ್ಮಾರ, ಅಕ್ಕಸಾಲಿ, ಬಡಗಿ, ಕಂಚುಗಾರ, ಶಿಲ್ಪಿಗಳನ್ನು ಒಳಗೊಂಡ ಪಾಂಚಾಳರು ದಸರಾ ಹಬ್ಬವನ್ನು ಬಹಳ ವಿಶಿಷ್ಟವಾಗಿ ಆಚರಿಸುತ್ತಾರೆ. ಬನ್ನಿ ಮರವನ್ನು ಪಾಂಚಾಳರು 'ಕಾಳಿ' ಎಂಬ ದೃಷ್ಟಿಯಿಂದ ಪೂಜಿಸುತ್ತಾ ಬಂದಿದ್ದಾರೆ. 'ಪಾಂಡವರು ವನವಾಸದಲ್ಲಿ ಊಟ ಮಾಡಿದ್ದು ಈ ಬನ್ನಿಎಲೆಯಲ್ಲಿಯೇ' ಎನ್ನುವುದು ಪಾಂಚಾಳರ ನಂಬಿಕೆ. ಪಾಂಚಾಳರು ವಿಜಯದಶಮಿಯ ದಿನ ಬನ್ನಿಮರಕ್ಕೆ ಹೋಗಿ ಮರದ ಬನ್ನಿಪತ್ರಿಯನ್ನು ತಂದು ಪೂಜಿಸಿ ಕಾಳಮ್ಮನಿಗೆ ಏರಿಸಿದ ಮೇಲೆ ಉಳಿದ ದೇವರಿಗೆ ಏರಿಸಿ, ನಂತರ ಜನರಿಗೆ ಬನ್ನಿಕೊಡುವ ಸಂಪ್ರದಾಯವಿದೆ. ಪ್ರತಿ ಮನೆಯಲ್ಲಿ ದೇವಿಯ ಪುರಾಣವನ್ನು ಓದುತ್ತಾರೆ. 'ಬನ್ನಿಯ ಗಿಡದಾಗ ಬಾಣ ಇಟ್ಟೇವಿ ತಾಯಿ, ನೀನೆ ಕಾಪಾಡು' ಎನ್ನುತ್ತಾರೆ. ಬನ್ನಿಮರವನ್ನು ಕುಲದೇತೆಯನ್ನಾಗಿ ಸ್ವೀಕರಿಸಿರುವ ಪಾಂಚಾಳರು ಅದರ ಕಟ್ಟಿಗೆಯನ್ನು ಒಲೆಗೆ ಹಚ್ಚುವುದಿಲ್ಲ. ಮತ್ತು ಅದರಿಂದ ಮರ ಮುಟ್ಟಿನ ಕೆಲಸವನ್ನು ಮಾಡುವುದಿಲ್ಲ. ಕಾಲಿನಿಂದ ತುಳಿಯುವುದಿಲ್ಲ. ಕಾಳಿಗೆ ಪ್ರಿಯ ಎಂದು ಭಾವಿಸುವ ಕಣಗಿಲೆ ಹೂವನ್ನು ಮುಡಿಯುವುದಿಲ್ಲ.

ತೊಗಲುಗೊಂಬೆ ಕಲಾವಿದರಾದ ಸಿಳ್ಳೇಕ್ಯಾತ ಸಮುದಾಯವು ಈ ಸಂದರ್ಭದಲ್ಲಿ ವೃತ್ತಿಗೆ ಸಹಾಯಕವಾದ ತೊಗಲುಗೊಂಬೆಗಳನ್ನು ಪೂಜಿಸಿ ನಂತರ ಕುರಿಯನ್ನು ಬಲಿಕೊಡುತ್ತಾರೆ. ಮಹಾನವಮಿಯ ದಿನ ಸಿಳ್ಳೇಕ್ಯಾತರ ಸಮುದಾಯದವರು ಹಿರಿಯರ ಹಬ್ಬ ಮತ್ತು ಆಯುಧ ಪೂಜೆ ಎರಡನ್ನೂ ಏಕಕಾಲದಲ್ಲಿ ಆಚರಿಸುತ್ತಾರೆ. ಅಂದು ಕೆಲವರು ಸಿಹಿ ಅಡುಗೆ ಮಾಡಿದರೆ, ಮತ್ತೆ ಕೆಲವರು ಕುರಿ–ಮೇಕೆಗಳನ್ನು ಬಲಿಕೊಟ್ಟು ಮಾಂಸಾಹಾರದ ಎಡೆ ಹಾಕುತ್ತಾರೆ. ತಮ್ಮ ಕುಲದ ಶಕ್ತಿ ದೇವತೆಗಳಾದ ಎಲ್ಲಮ್ಮ, ಹುಲಿಗೆಮ್ಮ, ಗಾಳೆಮ್ಮ ದೇವಿಯ ಹೆಸರಿನಲ್ಲಿ ಐದು ಇಲ್ಲವೇ ನವರಾತ್ರಿಯ ಒಂಬತ್ತು ದಿನಗಳವರೆಗೆ ಎಣ್ಣೆ ಅಥವಾ ತುಪ್ಪದ ದೀಪಗಳನ್ನು ಅಲಂಕಾರಗೊಂಡ ದೇವಿಯ ಮುಂದೆ ಹಚ್ಚಲಾಗುತ್ತದೆ.

ಮಧ್ಯಕರ್ನಾಟಕದ ಬುಡಕಟ್ಟು ಸಮುದಾಯವಾದ ಮ್ಯಾಸಬೇಡರಿಗೂ ದಸರಾ ದೊಡ್ಡ ಹಬ್ಬವಾಗಿದೆ. ವಿಶೇಷವಾಗಿ ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದ ಬೇಡರ ಆಚರಣೆಗಳು ಇಲ್ಲಿವೆ. ಹಾಗಾಗಿ ಬೇಟೆಯ ಎಲ್ಲಾ ಆಯುಧಗಳನ್ನು ಪೂಜೆ ಮಾಡಿ ಕುರಿ ಬಲಿಕೊಡುತ್ತಾರೆ. ನಂತರ ಯುಗಾದಿಗೆ ಬೇಟೆಗೆ ಹೋಗುವ ಮಾದರಿಯಲ್ಲಿ ದಸರಾ ಹಬ್ಬದಲ್ಲೂ ಬೇಟೆಗೆ ಹೋಗುತ್ತಾರೆ. ದೇವರ ಎತ್ತುಗಳನ್ನು (ಕಿಲಾರಿ) ಮತ್ತು ಪೆಟ್ಟಿಗೆ ದೇವರುಗಳನ್ನು ಎಬ್ಬಿಸಿ ಬನ್ನಿ ಮರದ ಹತ್ತಿರಕ್ಕೆ ಒಯ್ದು ಬನ್ನಿ ಮುಡಿಯುತ್ತಾರೆ. ಹಬ್ಬದ ಸಲುವಾಗಿ ಹಲವಾರು ಪಂದ್ಯಾವಳಿಗಳನ್ನು ನಡೆಸುತ್ತಾರೆ.

ಮಹಾಲಯ ಅಮಾವಾಸ್ಯೆಯು ಫಿಸಾಡಿ ಸಮುದಾಯದವರಿಗೆ ತಮ್ಮ ಕುಲದೇವರ ಹಬ್ಬವಾಗಿದ್ದು, ಇವರು ಈ ಹಬ್ಬವನ್ನು ಬಹಳ ವಿಶೇಷ ಭಕ್ತಿ ಭಾವ, ಪೂಜೆಯೊಂದಿಗೆ